ಗೊಂಬೆಯಾಗಿಯೋ ಬದುಕಬೇಕೆಂಬುದನ್ನ ಕಲ್ಪಿಸಿಕೊಂಡಷ್ಟು ಒಳಗಿಂದಿಳಗೆ ಇನ್ನಷ್ಟು ಕುದಿಯುತ್ತಿದ್ದಳು.

ತಮ್ಮನ ಮದುವೆ ಆಗಲಿರುವ ಆ ಹುಡುಗಿ ನಗುತ್ತ ಅವನ ಕಿರುಬೆರಳನ್ನು ಕೈಯಲ್ಲಿ ಹಿಡಿದುಕೊಂಡು ಅದರೊಡನೆ ಅದೆಂತದೋ ಲತಾಂಗಿಯ ಹಾಗಿನ ಬಳ್ಳಿಯ ಆಟವಾಡುತ್ತ... ಮುನಿಸಿಕೊಳ್ಳುವ ರೀತಿಯ ನಾಚಿಕೆಯನ್ನೂ, ನವಿರಾದ ಕುಡಿನೋಟದ ವಿರಹದ ಸಂದೇಶವನ್ನು ಕಣ್ಮೂಲಕ ಅವನ ಕಂಗಳಿಗೆ ದಾಟಿಸುವ, ನಗುವಿನಲ್ಲೇ ಜೀವಮಾನದ ಚೆಲುವೆಲ್ಲ ತುಂಬಿಕೊಂಡಂತಿರುವ ಆಕೆಯ ನಡವಳಿಕೆ ಈಕೆಯ ಮನಸ್ಸಿನ ಆಳದಲ್ಲೆಲ್ಲೋ ಅಪೂರ್ಣತೆಯ ಬಿಂಬವನ್ನು ಕಂಡ ಹಾಗಿತ್ತು. ತಾನು ಪ್ರೀತಿಸಬಹುದಾದ ಹುಡುಗ ಹೇಗೆಲ್ಲ ಇರಬೇಕು, ಮದುವೆ ಆಗುವ ಆ ಗಂಡಿನಲ್ಲಿ ಇರಬೇಕಾದ ಗುಣಲಕ್ಷಣಗಳ ಕುರಿತು, ಅವನ ಹವ್ಯಾಸ ಅಭ್ಯಾಸ ರೂಢಿಗಳ ಬಗ್ಗೆ, ತನ್ನ ಅಪಾರವಾದ ಮನಸ್ಸನ್ನು ಅವನಿಗೆ ಅವನದನ್ನು ತನಗೆ... ಎಲ್ಲ ಕನಸುಗಳು ಹಗಲಾಗಿ, ಇರುಳಾಗಿ, ಚಿತ್ರವತ್ತಾಗಿ ಕಣ್ಣಮುಂದೆ ಸುಳಿಯುತ್ತಿರುವಾಗಲೇ ಮದುವೆಯ ಅವಸರ ಶುರುವಾದದ್ದು.

★★★

ವಾರದ ಹಿಂದಷ್ಟೆ ಸಣ್ಣ ಕೂಸೊಂದನ್ನು ಸೇರಿಸಿಕೊಂಡು ಮಂದಿ ಐದಾಗಿ ಬಂದು ಹಣ್ಣೆಟ್ಟು ಕುಶಲೋಪರಿ ಎಂಬಂತೆ ಗೊತ್ತೂವಳಿ, ಸಂಬಂಧ, ಹತ್ತಗಡಿ ಎಂಬಿತ್ಯಾದಿ ಕಳ್ಳುಬಳ್ಳಿಯ ಎಳೆಯೊಂದನ್ನು ಹುಡುಕಿಕೊಂಡು ಹೋಗಲು ಬಂದ ಆ ದಿವಸ ಚುಳುಗುಟ್ಟುವ ಎದೆಯ ದುಗುಡವನ್ನು ಸೈರಿಸಿಕೊಂಡು ನಿಂತಿದ್ದವಳ ಮೈಗೆ ಸೀರೆಯೊಂದು ತೊಡಕಾಗಿತ್ತು. ಸಿಂಗರಿಸಿಕೊಳ್ಳುತ್ತಲೇ ಕನಸು ಕಾಣುವ ಮದುವಣಗಿತ್ತಿಯ ಯಾವ ಅಂಶವೂ ಆಕೆಯಲ್ಲಿ ಉಳಿದಿರಲಿಲ್ಲ. ಲೋಕ ಬದಲಾಗಿದ್ದರೂ ಅವಳ ಅಪ್ಪನ ಆತಂಕವೇನೂ ಕಡಿಮೆಯಾಗಿರಲಿಲ್ಲ. ಹೊರಟರೆ ಎಲ್ಲಿಗೆ ಹೊರಟೆ ಎಂದು ಕೇಳುವುದರಿಂದ ಹಿಡಿದು ಎಲ್ಲೆಲ್ಲಿ ಹೋಗಿದ್ದಳು, ಏನೇನು ಮಾಡಿದಳು, ಹೇಗೆಲ್ಲ ನಡೆದುಕೊಂಡಳು, ಯಾರೆಲ್ಲ ಎದುರಿಗೆ ಸಿಕ್ಕು ಮಾತಾಡಿಸಿದರು ಎಂಬಂಥ ಹತ್ತಾರು ಕುತೂಹಲದ ಪ್ರಶ್ನೆಗಳನ್ನಿಟ್ಟುಕೊಂಡು ಕಾಯುತ್ತಿದ್ದ. ಒಮ್ಮೊಮ್ಮೆ ಅಪ್ಪನ ಪ್ರೀತಿಗೆ, ಕಾಳಜಿಗೆ ಕರಗಿ ಅಪ್ಪನ ತರಹದವನೇ ತನಗೂ ಗಂಡನಾಗಿ ಸಿಗಬೇಕು ಎಂದು ಕನಸಿದ್ದಳು. ದಿನಗಳು ಕಳೆದಂತೆ ಮದುವೆ ಮಾಡಿ ಕೈತೊಳೆದುಕೊಳ್ಳುವ, ಬದುಕಿಗೆ ಅಂಟಿಸಿ ತಾನು ಹಗೂರಾಗುವ ಅವಸರಕ್ಕೆ ಬಿದ್ದವನು ಹದ್ದಿನ ಕಣ್ಣಂತೆ ಗುರಿಯಿಟ್ಟುಕೊಂಡು ಕೂತುಬಿಟ್ಟಾಗ ಹುಚ್ಚನಂತಾಗಿದ್ದ.

ಅದೆಷ್ಟು ಜನ ಗಂಡಸರು... ಬಂದವರೆಲ್ಲ ಹೆಸರು ಕೇಳಿದರು, ಎತ್ತನ್ನು ಪರೀಕ್ಷಿಸುವಂತೆ ಶಾರದೆಯ ಮೈಮಾಟವನ್ನು ಅವ್ಯಕ್ತವಾಗಿ ದೃಷ್ಟಿಸುತ್ತಲೇ ಹೋಗುತ್ತಿದ್ದರು. ಎತ್ತರಿದ್ದಾಳೆ, ಕೊಂಚ ಕಪ್ಪಗಿದ್ದಾಳೆ, ನೀಳ ಮೂಗು, ಧಾಡಸಿ, ನಮ್ಮ ಮನೆಗೆ ಸರಿಹೊಂದಲಾರಳು ಇಂಥವೇ ಹತ್ತಾರು ಕಾರಣಗಳ ನಡುವೆ ಆಕೆಯ ಕಣ್ಣೀರು ಕರಗುತ್ತಿದ್ದವು. ಒಮ್ಮೆ ಮನಸ್ಸು ಬಿಚ್ಚಿ ಹೇಳಬೇಕೆಂದು ಬಾಯ್ದೆರೆದವಳು ಅಪ್ಪನ ಕಣ್ಣುಗಳಲ್ಲಿ ಮಡುಗಟ್ಟಿದ್ದ ಅಸಹಾಯಕತೆಯ ವಿಷಾದವನ್ನು ಕಂಡು ಸುಮ್ಮನಾಗಿದ್ದಳು. ಬರಲಿರುವ ಗಂಡಿಗಾಗಿ ತನ್ನ ಮಾದಕತೆಯನ್ನು ಇನ್ನಷ್ಟು, ಮತ್ತಷ್ಟು ಮೋಹಕಗೊಳಿಸಿಕೊಳ್ಳುವ ಹಾಗಿನ ಬಟ್ಟೆಬರೆ ತೊಟ್ಟು, ಮಾಡೆಲ್ಲುಗಳ ಹಾಗಿನ ಯಾಂತ್ರಿಕ ನಗು ಹೊತ್ತಿರುತ್ತಿದ್ದಳು. ಅದೇ ಆ ಅವಲಕ್ಕಿ, ಉಪ್ಪಿಟ್ಟು, ಬಾಳೆಹಣ್ಣು, ಚಹಾ, ಕಾಫಿ, ವೀಳ್ಯೆದೆಲೆಯೊಂದಿಗೆ ಸುವಾಸನೆಭರಿತ ಅಡಿಕೆಯ ಪುಡಿಯ ತಟ್ಟೆ, ಆ ಹೆಸರು,